## ನಿಮ್ಮೊಡನೆ

# ವಿವಿ ತಿದ್ದುಪಡಿ ವ್ಯರ್ಥ ಕಸರತ್ತು

ವಿಶ್ವವಿದ್ಯಾಲಯ ಕುಲಪತಿ ಆಕಾಂಕ್ಷಿಗಳು ಅರ್ಜಿ ಹಾಕಿಕೊಳ್ಳುವುದು ಸೇರಿದಂತೆ ಪ್ರಮುಖವಾದ ಏಳು ತಿದ್ದುಪಡಿಗಳೊಂದಿಗೆ 'ಕರ್ನಾಟಕ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ವಿಧೇಯಕ– 2013'ಕ್ಕೆ ವಿಧಾನ ಪರಿಷತ್ತು ಬುಧವಾರ ತರಾತುರಿಯಲ್ಲಿ ಅಂಗೀಕಾರ ನೀಡಿದೆ.

ಹತ್ತಾರು ವರ್ಷಗಳ ಕಾಲ ಸಂಶೋಧನೆ, ಅಧ್ಯಾಪನೆಯಲ್ಲಿ ತೊಡಗಿಕೊಂಡಿರುವ ಪ್ರಾಧ್ಯಾಪಕರು– ಇನ್ನು ಮುಂದೆ ಕೆಲಸಕ್ಕೆ ಅರ್ಜಿ ಹಾಕುವ ಯುವಕರ ಸಾಲಿನಲ್ಲಿ ನಿಂತುಕೊಳ್ಳಬೇಕು! ಅರ್ಜಿ ಹಾಕಿದಾಕ್ಷಣ ಸ್ವೀಕೃತ ಆಗಿಬಿಡುತ್ತದೆ ಎಂದೇನಲ್ಲ. ಅರ್ಜಿಗಳನ್ನು ಪರಿಶೀಲಿಸಿ ಅರ್ಹವಾದ ಕೆಲವನ್ನು ಶೋಧನಾ ಸಮಿತಿಗೆ ಕಳಿಸಿಕೊಡಲಾಗುತ್ತದೆ. ಅರ್ಹತೆ, ಅನುಭವಗಳಿಗೆ ಆದ್ಯತೆ ನೀಡಿ ಸಮಿತಿಯು ಮೂವರ ಹೆಸರನ್ನು ಅಂತಿಮಗೊಳಿಸುತ್ತದೆ. ಅರ್ಹ ಪ್ರಾಧ್ಯಾಪಕರು ಶೋಧನಾ ಸಮಿತಿಗೆ ಅರ್ಜಿ ಸಲ್ಲಿಸಿಕೊಳ್ಳುತ್ತಿದ್ದ ಪದ್ಧತಿ ಇದುವರೆಗೂ ಪರೋಕ್ಷವಾಗಿ ನಡೆಯುತ್ತಿತ್ತು ಅಥವಾ ಶೋಧನಾ ಸಮಿತಿಯೇ ಅಂತಹ ಕೆಲವು ಹಿರಿಯರ ಪಟ್ಟಿ ಹೊಂದಿರುತ್ತಿತ್ತು. ಆದರೆ ಖುಲ್ಲಂಖುಲ್ಲಾ ಅರ್ಜಿ ಆಹ್ವಾನಿಸುವ ಪದ್ಧತಿ ಇರಲಿಲ್ಲ. ಇದರಿಂದ ಕುಲಪತಿ ಹುದ್ದೆ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಬಹುದೇ ಹೊರತು, ಹೆಚ್ಚಿನದೇನನ್ನೂ ನಿರೀಕ್ಷಿಸಲಾಗದು.

'ರಾಜ್ಯಪಾಲರಿಗೆ 2–3 ಕೋಟಿ ರೂ. ಲಂಚ ಕೊಡದೆ ಕುಲಪತಿ ಹುದ್ದೆ ದೊರೆಯಲಾರದು. ಕುಲಪತಿ ಆಗಬಯಸಿದ್ದ ಮಹಿಳೆಯೊಬ್ಬರಿಗೆ 6 ಕೋಟಿ ರೂ. ಲಂಚ ಕೇಳಲಾಯಿತು' ಎಂಬ ಉದಾಹರಣೆಯನ್ನು ವಿಧಾನ ಪರಿಷತ್‌ನಲ್ಲಿ ಆಡಳಿತ ಪಕ್ಷದ ಸದಸ್ಯರು ಸೇರಿದಂತೆ ಹಲವರು ಬಹಿರಂಗಪಡಿಸಿದ್ದಾರೆ. ಆದರೆ ಈಗ ತಂದಿರುವ ತಿದ್ದುಪಡಿಯಿಂದ ಭ್ರಷ್ಟಾಚಾರಕ್ಕೆ ಹೇಗೆ ಕಡಿವಾಣ ಬೀಳುತ್ತದೆ ಎಂಬುದು ಮನದಟ್ಟಾಗುತ್ತಿಲ್ಲ.

ಒಂದು ವಿವಿಯಿಂದ ಮತ್ತೊಂದು ವಿವಿಗೆ ಪ್ರಾಧ್ಯಾಪಕರನ್ನು ಸಾರ್ವತ್ರಿಕ ವರ್ಗಾವಣೆ ಮಾಡಲು ತಿದ್ದುಪಡಿ ಅವಕಾಶ ನೀಡಿದೆ. ಪರಸ್ಪರ ಒಪ್ಪಿಗೆಯಿಂದ ವರ್ಗಾವಣೆಗೆ ಈಗಾಗಲೇ ಅವಕಾಶ ಇತ್ತು. ಅದು ಸರಿಯೂ ಇತ್ತು. ವಿಜ್ಞಾನ ವಿಭಾಗದ ಪ್ರಾಧ್ಯಾಪಕನೊಬ್ಬ ತನ್ನ ಸಂಶೋಧನಾ ಕಾರ್ಯಕ್ಕೆ ಬೇಕಾದ ಸುಸಜ್ಜಿತ ವ್ಯವಸ್ಥೆಯನ್ನು ಒಂದು ವಿವಿಯಲ್ಲಿ ನಿರ್ಮಿಸಿಕೊಂಡಿದ್ದರೆ, ಸಾರ್ವತ್ರಿಕ ವರ್ಗಾವಣೆ ಆತನ ಸಂಶೋಧನಾ ಕಾರ್ಯಕ್ಕೆ ಭಂಗ ಉಂಟುಮಾಡುತ್ತದೆ. ಹತ್ತಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ವಿಭಾಗಗಳನ್ನು ಮುಚ್ಚುವ ನಿರ್ಧಾರವು– ಈಗಾಗಲೇ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಒಂದೊಂದಾಗಿ ಮುಚ್ಚುವ ಕ್ರಮದ ಮುಂದುವರಿಕೆಯಾಗಿದೆ. ಮಿತವ್ಯಯದ ನೆಪದಲ್ಲಿ ಆರ್ಥಿಕ ಇಲಾಖೆಯು ಶಿಕ್ಷಣದ ಲಗಾಮು ಹಿಡಿದಿರುವ ಪರಿ ಇದು.

'ಕುಲಸಚಿವ ಹುದ್ದೆಗೆ ಐಎಎಸ್, ಐಪಿಎಸ್ ಅಧಿಕಾರಿಗಳು ಬರಲು ಒಪ್ಪುತ್ತಿಲ್ಲ. ಸದ್ಯಕ್ಕೆ ಈ ಹುದ್ದೆಗೆ ಪ್ರಾಧ್ಯಾಪಕರನ್ನೇ ನೇಮಿಸಿಕೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಹಿರಿಯ ಕೆಎಎಸ್ ಅಧಿಕಾರಿಗಳ ಮನವೊಲಿಸಿ ಕುಲಸಚಿವ ಹುದ್ದೆಗೆ ನೇಮಿಸಿಕೊಳ್ಳಲು ಆದ್ಯತೆ ನೀಡಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಸಿ.ಟಿ.ರವಿ ಸದನದಲ್ಲಿ ಸಮಜಾಯಿಷಿ ನೀಡಿದ್ದಾರೆ. ಕುಲಸಚಿವ ಹುದ್ದೆಗೆ ಆಡಳಿತಜ್ಞಾನ ಮುಖ್ಯ ಎಂಬ ಕಾರಣಕ್ಕೆ ಐಎಎಸ್, ಕೆಎಎಸ್ ಅಧಿಕಾರಿಗಳನ್ನು ನೇಮಿಸುವ ಕ್ರಮವನ್ನು ಡಾ.ಜಿ.ಪರಮೇಶ್ವರ ಅವರು ಶಿಕ್ಷಣ ಸಚಿವರಾಗಿದ್ದಾಗ ಜಾರಿಗೆ ತಂದಿದ್ದರು. ಅಧಿಕಾರಕ್ಕೆ ಬಂದ ತಕ್ಷಣ ಆ ನಿಯಮ ತೆಗೆದುಹಾಕಿದ್ದ ಬಿಜೆಪಿ ಸರ್ಕಾರ ಈಗ ಮತ್ತೆ ಅದೇ ನಿಯಮದತ್ತ ವಾಲಿದೆ. ಐಎಎಸ್ ಇರಲಿ, ಪ್ರಾಧ್ಯಾಪಕರಿರಲಿ– ಯಾರೇ ಕುಲಸಚಿವರಾದರೂ ಅವರ ಅಧಿಕಾರ ವ್ಯಾಪ್ತಿ ಏನು ಎಂಬುದು ನಿಗದಿಯಾಗಬೇಕು. ಕುಲಪತಿ ಸ್ಥಾನದ ಮೇಲೆ ಕುಲಸಚಿವರು ಸವಾರಿ ಮಾಡುವಂತಿರಬಾರದು. ಈ ಬಗ್ಗೆ ಸದನದಲ್ಲಿ ಹೆಚ್ಚಿನ ಚರ್ಚೆ ಆಗಿಲ್ಲ ಅಥವಾ ಚರ್ಚೆಗೆ ಅವಕಾಶ ಇರಲಿಲ್ಲ.

ಕುಲಸಚಿವರ ಅಧಿಕಾರ ವ್ಯಾಪ್ತಿ ಏನು ಎಂಬುದು ನಿಗದಿಯಾಗಬೇಕು. ಕುಲಪತಿ ಸ್ಥಾನದ ಮೇಲೆ ಕುಲಸಚಿವರು ಸವಾರಿ ಮಾಡುವಂತಿರಬಾರದು. ಈ ಬಗ್ಗೆ ಸದನದಲ್ಲಿ ಚರ್ಚೆ ಆಗಿಲ್ಲ.



ಬಹುತೇಕ ಅಧ್ಯಯನ ಪೀಠಗಳು ನಾಮ್‌ಕಾವಾಸ್ತೆ ಆಗಿದ್ದರಿಂದ ವಿದ್ಯಾರ್ಥಿಗಳಿಲ್ಲದ ಅಧ್ಯಯನ ಪೀಠಗಳನ್ನು ಮುಚ್ಚುವ ಕ್ರಮ ಸ್ವಾಗತಾರ್ಹ. ಕುಲಪತಿ ಅನಂತನ್ ನೇತೃತ್ವದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ 12 ಮಂದಿ ಸಾಧಕರಿಗೆ ಡಾಕ್ಟರೇಟ್ ನೀಡಿರುವುದನ್ನು ಪಕ್ಷಭೇದ ಮರೆತು ಎಲ್ಲ ಸದಸ್ಯರು ತರಾಟೆಗೆ ತೆಗೆದುಕೊಂಡಿದ್ದಾರೆ. 'ಐವರಿಗೆ ಮಾತ್ರ ಡಾಕ್ಟರೇಟ್ ನೀಡಬೇಕು. ಈ ವಿಷಯದಲ್ಲಿ ರಾಜ್ಯಪಾಲರ ಅಧಿಕಾರಕ್ಕೆ ನಿಯಂತ್ರಣ ಹೇರುವ ಅಧಿಕಾರ ನಮಗಿಲ್ಲ. ಹಾಗಾಗಿ ಸಲಹೆ ನೀಡಲಾಗುವುದು' ಎಂದು ಶಿಕ್ಷಣ ಸಚಿವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಸಿಂಡಿಕೇಟ್‌ಗೆ ಇಬ್ಬರು ಶಾಸಕರು, ಒಬ್ಬರು ವಿಧಾನ ಪರಿಷತ್ ಸದಸ್ಯರನ್ನು ನೇಮಕ ಮಾಡುವ ಮೂಲಕ ಪಕ್ಷದ ಕಾರ್ಯಕರ್ತರನ್ನು ತೃಪ್ತಿಪಡಿಸಲು ವಿಶ್ವವಿದ್ಯಾಲಯವನ್ನು ತಾಣವಾಗಿ ಮಾಡಿಕೊಂಡಂತಾಗಿದೆ. ಎಲ್ಲೋ ಒಂದೆರಡು ಚಿಕ್ಕಪುಟ್ಟ ಬದಲಾವಣೆ ಬಿಟ್ಟರೆ, ತಿದ್ದುಪಡಿಯಲ್ಲಿ ಅಂತಹ ಹೊಸದೇನೂ ಇಲ್ಲ. ಬೆಟ್ಟ ಅಗೆದು ಇಲಿ ಹಿಡಿದ ಹಾಗಾಗಿದೆ.

■ ಗುಡಿಹಳ್ಳಿ ನಾಗರಾಜ